<u>ದಿನಾಂಕ 18-10-2019 ರಂದು ಸಾಕ್ಷಿಧಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>: ಪಾಟೀ ಸವಾಲುಃ 4 ನೇ ಪ್ರತಿವಾದಿ ಪರ ವಕೀಲರಿಂದ :</u>

ನಾನು 1 ನೇ ಪ್ರತಿವಾದಿಯ ಹಿರಿಯ ಮಗಳು ಇದ್ದೇನೆ. 2008 ರಲ್ಲಿ ನಾನು ಬಿ ಎ ಬಿ.ಎಡ್ ಪದವಿಯನ್ನು ಮುಗಿಸಿದ್ದೇನೆ. 2004-05 ರಲ್ಲಿ ನಾನು ಪದವಿ ಅಭ್ಯಾಸ ಮಾಡುತ್ತಿದ್ದೆನು. ನಾನು ಶಿಕ್ಷಕಳಾಗಿ ಶಿಗ್ಗಾಂವ್ ನಲ್ಲಿ ಕೆಲಸ ಮಾಡುತ್ತಿದ್ದೇನೆ. 2012 ರ ವರೆಗೆ ನಮ್ಮ ಮನೆತನದ ಎಲ್ಲ ವ್ಯವಹಾರಗಳ ಬಗ್ಗೆ ನನಗೆ ಮಾಹಿತಿ ಇತ್ತು. ನಮ್ಮ ತಂದೆ ಕುಡಿತ, ಜೂಜಾಟ ಮಾಡುತ್ತಾ ಸರಿಯಾಗಿ ಮನೆಗೆ ಬರುತ್ತಿರಲಿಲ್ಲ ಮತ್ತು ಬ್ಯಾಂಕ್ ನೌಕರಿಗೂ ಹೋಗುತ್ತಿರಲಿಲ್ಲ. ನನಗೆ ತಿಳುವಳಿಕೆ ಬಂದಾಗಿನಿಂದಲೂ ನಮ್ಮ ತಂದೆ ಕುಡಿತ, ಜೂಜಾಟ ಮಾಡುತ್ತಾ ಬಂದಿದ್ದಾರೆ. ನನಗೆ 5-6 ವರ್ಷ ವಯಸ್ಸಿದ್ದಾಗಲೇ ತಿಳುವಳಿಕೆ ಬಂದಿದೆ. 1992-93 ರಿಂದ ನಮ್ಮ ತಂದೆ ಕುಡಿತ, ಜೂಜಾಟ ಮಾಡುತ್ತಾ ಬಂದಿದ್ದಾರೆ. 2015 ರಲ್ಲಿ ನಮ್ಮ ತಂದೆ ನಿವೃತ್ತರಾಗಿದ್ದಾರೆ. ನಮ್ಮ ತಂದೆ ವಯೋನಿವೃತ್ತಿ ಹೊಂದಿದ್ದಾರೆ. ನಮ್ಮ ತಂದೆ ಸರಿಯಾಗಿ ಬ್ಯಾಂಕ್ ಕೆಲಸಕ್ಕೆ ಹೋಗದೇ ಕರ್ತವ್ಯ ಲೋಪ ಎಸಗಿದ್ದಾರೆ ಅಂತಾ ಬ್ಯಾಂಕಿನವರು ನಮ್ಮ ತಂದೆಗೆ ನೋಟೀಸನ್ನು ಕೊಟಿದ್ದಾರೆ. ನಮ್ಮ ತಂದೆಯ ವಿರುದ್ಧ 2-3 ಬಾರಿ ಇಲಾಖಾ ವಿಚಾರಣೆ ಮಾಡಿದ್ದಾರೆ. ಇಲಾಖಾ ವಿಚಾರಣೆ ನಂತರ ಏನು ಆದೇಶ ಮಾಡಿದ್ದಾರೆ ಅಂತಾ ನನಗೆ ಗೊತ್ತಿಲಾ. ನಮ್ಮ ತಂದೆಯ ವಿರುದ್ಧ 2-3 ಬಾರಿ ಇಲಾಖಾ ವಿಚಾರಣೆ ಮಾಡಿದ ಬಗ್ಗೆ ನ್ಯಾಯಾಲಯದ ಮುಂದೆ ದಾಖಲೆಗಳನ್ನು ಹಾಜರು ಮಾಡಿರುವುದಿಲ್ಲಾ. ನಮ್ಮ ತಂದೆ ಸರಿಯಾಗಿ ಕರ್ತವ್ಯ ನಿರ್ವಹಿಸುತ್ತಿಲ್ಲ ಅಂತಾ ಬ್ಯಾಂಕಿನವರು ನೋಟೀಸನ್ನು ಕಳಿಸಿದ್ದಾರೆ ಅಂತಾ ನನ್ನ ತಾಯಿ ನನಗೆ ಹೇಳಿದ್ದಾಳೆ. ಬ್ಯಾಂಕ್ ತಂದೆ ಹಣ ದುರುಪಯೋಗಪಡಿಸಿಕೊಂಡಿದ್ದಾರೆ ಅಂತಾ ಬ್ಯಾಂಕಿನವರು ನಮ್ಮ ತಂದೆಗೆ ನೋಟೀಸನ್ನು ಕೊಟ್ಟಿರುವುದಿಲ್ಲಾ. ಸದರಿ ವಿಷಯವನ್ನು ನಮ್ಮ ತಾಯಿ ಯಾವಾಗ ಹೇಳಿದ್ದಾರೆ ಅಂತಾ ನನಗೀಗ ನೆನಪಿಲ್ಲಾ. ನಮ್ಮ ತಂದೆ ಸಂಬಂದಿಂದ ಕುಡಿತ

ಜೂಜಾಟ ಮಾಡುತ್ತಾನೆ, ಅದರಿಂದ ನಮ್ಮ ಜೀವನ ನಿರ್ವಹಣೆಗೆ ತೊಂದರೆಯಾಗುತ್ತದೆ. ಆದ್ದರಿಂದ ಪೂರ್ತಿ ಸಂಬಳವನ್ನು ಆತನಿಗೆ ಕೊಡಬಾರದು ಅಂತಾ ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲಾ. ನಮ್ಮ ತಂದೆ ಒಳ್ಳೆಯ ಬ್ಯಾಂಕ್ ಉದ್ಯೋಗಿಯಾಗಿ ಸರಿಯಾಗಿ ಕರ್ತವ್ಯ ನಿರ್ವಹಿಸಿ ನಿವೃತ್ತಿಯಾಗಿದ್ದರೂ, ನಮ್ಮ ತಂದೆ ಕುಡಿತ ಜೂಜಾಟ ಮಾಡುತ್ತಿದ್ದರು ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದ್ರೆ ಸರಿಯಲ್ಲಾ. ದಾವಾ–2 ಬಿ ದಿಂದ ದಾವಾ–2 ಡಿ ಆಸ್ತಿಗಳನ್ನು ನಮ್ಮ ದೊಡ್ಡಪಪ ಚಿಕ್ಕಪ್ಪಂದಿರ ಸಹಾಯದಿಂದ ನಮ್ಮ ತಂದೆಯ ಹೆಸರಿನಲ್ಲಿ ಖರೀದಿಸಿದ್ದೇವೆ. ಸರ್ವೆ ನಂ. 56/7 ನ್ನು ಮುದುಕಣ್ಣ ಎನ್ನುವವರಿಂದ 1998 ರಲ್ಲಿ 03 ಎಕರೆ ಜಮೀನನ್ನು ರೂ.80000/– ಗಳಿಗೆ ಖರೀದಿಸಿದ್ದೇವೆ. 1991–1992 ರಿಂದಲೂ ನಮ್ಮ ತಂದೆ ಕುಡಿತ ಜೂಜಾಟವನ್ನು ತನ್ನ ಸಂಬಳದಲ್ಲಿ ಮಾತ್ರ ಮಾಡುತ್ತಾನೆ ಅಂತಾ ಆತನೇ ಹಸರಿಗೆ ದಾವಾ–2 ಬಿ ದಿಂದ ಡಿ ವರೆಗಿನ ಆಸ್ತಿಗಳನ್ನು ಖರೀದಿಸಿದ್ದೇವೆ. ನಮ್ಮ ತಂದೆ ವಿಶ್ವನಾಥ ಹೆಸರಿನಲ್ಲಿ ಇದ್ದ ಕ್ರಯ ಪತ್ರದಲ್ಲಿ ಯಾವ ಚಿಕ್ಕಪ್ಪನಿಂದ ಯಾವ ದೊಡ್ಡಪ್ಪನಿಂದ ಎಷ್ಟು ಹಣ ಪಡೆದು ಖರೀದಿಸಿದ್ದೇವೆ ಅಂತಾ ಬರೆದಿರುವುದಿಲ್ಲಾ. ಆ ರೀತಿ ಬರೆಸಲು ನಮಗೆ ಯಾವುದೇ ತೊಂದರೆ ಇರಲಿಲ್ಲಾ. ನನ್ನ ಮದುವೆ ಕಾಲಕ್ಕೆ ದಾವಾ ಆಸ್ತಿಗಳನ್ನು ನಮ್ಮ ದೊಡ್ಡಪ್ಪನಿಗೆ ಉಳುಮೆ ಮಾಡಲು ಪಾಲಿನಂತೆ ಕೊಟ್ಟಿದ್ದೆವು. ಚೆನ್ನಪ್ಪ ಬಸಪ್ಪ ದೊಡ್ಡಮನಿ ಎನ್ನುವರ ಹೆಸರನ್ನು ಕೇಳಿದ್ದೇನೆ. 2005 ರಲ್ಲಿ ನಮ್ಮ ತಂದೆ ದಾವಾ–2 ಸಿ ಆಸ್ತಿಯನ್ನು ಮಾರಾಟಕ್ಕೆ ಹಚ್ಚಿದ್ದು, ಯಾರೂ ಜಮೀನನ್ನು ಖರೀದಿಸಲು ಮುಂದೆ ಬರದೇ ಇದ್ದಾಗ 4 ನೇ ಪ್ರತಿವಾದಿ ರೂ.1,20,000/– ಗಳಿಗೆ ಖಂಡಮೊಕ್ತ ಖರೀದಿಗೆ ಕೇಳಿದ್ದರಿಂದ ನಮ್ಮ ತಂದೆ ಅವರಿಗೆ ಮಾರಾಟ ಮಾಡಿದ್ದಾರೆ ಅಂದ್ರೆ ನನಗೆ ಗೊತ್ತಿಲ್ಲಾ. ನಮ್ಮ ತಂದೆ ಸಬ್ ರಜಿಸ್ಟಾರ್ ಕಚೇರಿಯಲ್ಲಿ ಸಂಪೂರ್ಣ ಕ್ರಯದ ಮೌಲ್ಯ ಪಡೆದು ದಾವಾ–2 ಸಿ ಆಸ್ತಿಯನ್ನು ಮಾರಾಟ ಮಾಡಿ ನೊಂದಣಿ ಕ್ರಯ ಪತ್ರ ಬರೆದುಕೊಟ್ಟಿದ್ದಾರೆ ಅಂದ್ರೆ ಸರಿಯಲ್ಲಾ. 2005 ರಿಂದ ಈವರೆಗೂ 5 ನೇ

ಪ್ರತಿವಾದಿಯೇ ದಾವಾ-2 ಸಿ ಆಸ್ತಿಯನ್ನು ಪ್ರತ್ಯಕ್ಷ ಕಬ್ಜಾ ಹೊಂದಿ ಸಾಗುವಳಿ ಮಾಡುತ್ತಾ ಬರುತ್ತಿದ್ದಾನೆ ಅಂದ್ರೆ ಸರಿಯಲ್ಲಾ. 2012 ರಿಂದ 4 ನೇ ವಾದಿಯೇ ದಾವಾ ಆಸ್ತಿಗಳನ್ನು ಸಾಗುವಳಿ ಮಾಡುತ್ತಾನೆ. ಅದಕ್ಕಿಂತ ಪೂರ್ವದಲ್ಲಿ ನಮ್ಮ ದೊಡ್ಡಪ್ಪ ಮತ್ತು ಚಿಕ್ಕಂದಿರ ಮೂಲಕ ದಾವಾ ಆಸ್ತಿಗಳನ್ನು ಸಾಗುವಳಿ ಮಾಡಿಸುತ್ತಿದ್ದವು. ಎಲ್ಲ ರೈತರು ಪ್ರತಿ ವರ್ಷ ಬೆಳೆ ವಿಮೆ ಮತ್ತು ಬೆಳೆ ಹಾನಿ ಪರಿಹಾರಕ್ಕಾಗಿ ಅರ್ಜಿ ಸಲ್ಲಿಸುತ್ತಾರೆ ಅಂದ್ರೆ ನಿಜ. ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ಯಾರು ಬೆಳೆ ವಿಮೆ ಮತ್ತು ಬೆಳೆ ಹಾನಿ ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಿದ್ದಾರೆ ಅಂತಾ ನನಗೆ ಗೊತ್ತಿಲ್ಲಾ. ಆ ಬಗ್ಗೆ ನಾನು ವಿಚಾರ ಮಾಡಿರುವುದಿಲ್ಲಾ. ಆ ಬಗ್ಗೆ ನಮ್ಮ ತಾಯಿ ವಿಚಾರ ಮಾಡಿದ್ದರ ಬಗ್ಗೆ ನನಗೆ ಗೊತ್ತಿಲ್ಲಾ. ದಾವಾ ಆಸ್ತಿಗಳಿಗೆ ಭೂಕಂದಾಯ ಪಾವತಿಸಬೇಕು ಅನ್ನುವುದು ನನಗೆ ಗೊತ್ತಿಲ್ಲಾ. ದಾವಾ ಆಸ್ತಿಗಳಿಗೆ ಭೂಕಂದಾಯವನ್ನು ನಮ್ಮ ದೊಡ್ಡಪ್ಪ ಪಾವತಿಸುತ್ತಿದ್ದರು. ಯಾವ ವರ್ಷದಿಂದ ಯಾವ ವರ್ಷದವರಗೆ ಕಟ್ಟಿದ್ದಾರೆ ಅಂತಾ ನನಗೆ ಗೊತ್ತಿಲ್ಲಾ. ನಾನು ನಮ್ಮ ದೊಡ್ಡಪ್ಪನಿಂದ ಕಂದಾಯ ಪಾವತಿಸಿದ ಬಗ್ಗೆ ರಶೀದಿಗಳನ್ನು ಕೇಳಿ ಪಡೆದುಕೊಂಡಿಲ್ಲಾ. 2012 ರಿಂದ 4 ನೇ ವಾದಿಗೆ ದಾವಾ ಆಸ್ತಿಗಳಿಗೆ ಭೂಕಂದಾಯವನ್ನು ಕಟ್ಟಿದ ಬಗ್ಗೆ ನಾನು ವಿಚಾರಿಸಿಲ್ಲಾ. ಈ ದಾವಾ ದಾಖಲಿಸಲು ನಮ್ಮ ಚಿಕ್ಕಪ್ಪ ವಕಿಲರಿಗೆ ಮಾಹಿತಿ ನೀಡಿದ್ದಾನೆ. ದಾವೆಯಲ್ಲಿ ಬರೆಸಿದ ವಿಚಾರ ನನಗೆ ಗೊತ್ತಿಲ್ಲ ಅಂದ್ರೆ ಸರಿಯಲ್ಲ. ನಾನೂ ಸಹ ಹೋಗಿದ್ದೆವು. ನಮ್ಮ ವಕೀಲರು ಕಂದಾಯ ಪಾವತಿಸಿದ ಬಗ್ಗೆ ರಶೀದಿಗಳನ್ನು ಕೇಳಿರುವುದಿಲ್ಲಾ. ದಾವಾ-2 ಸಿ ಆಸ್ತಿಯನ್ನು ಮಾರಾಟ ಮಾಡಿದ ಬಗ್ಗೆ 2012 ರಲ್ಲಿ ನಮಗೆ ಗೊತ್ತಾಗಿರುತ್ತದೆ. ನಾನು ಖರೀದಿದಾರರ ಹೆಸರಿನಲ್ಲಿ ಆದ ಖಾತಾ ವರ್ಗಾವಣೆ ಯನ್ನು ಪ್ರಶ್ನಿಸಿರುವುದಿಲ್ಲಾ. ಗೊತ್ತಾದ ನಂತರ ಈ ದಾವಾ ಸಲ್ಲಿಸಿದ್ದೇವೆ. 1 ನೇ ಪ್ರತಿವಾದಿ ನಮಗೆ ದಾವಾ ಆಸ್ತಿಗಳಲ್ಲಿ ಭಾಗಾಂಶ ಕೊಡುವುದಿಲ್ಲಾ ಅಂತಾ ಹೇಳಿದ್ದರಿಂದ ವಕೀಲರ ಮೂಲಕ ಈ ದಾವಾ ಸಲ್ಲಿಸಿದ್ದೇವೆ. ನಮ್ಮ ದೊಡ್ಡಪ್ಪ ಚಿಕ್ಕಪ್ಪ ಇತರೇ ಹಿರಿಯರು ಸೇರಿ 1 ನೇ ಪ್ರತಿವಾದಿಗೆ ದಾವಾ

ಆಸ್ತಿಗಳಲ್ಲಿ ಭಾಗಾಂಶ ಕೊಡುವಂತೆ ಪಂಚಾಯತಿ ಸೇರಿದ್ದಾರೆ. ಆದರೆ ಅವರು ಒಪ್ಪಿರುವುದಿಲ್ಲಾ. 3 ರಿಂದ 6 ನೇ ಪ್ರತಿವಾದಿಯರು ಖರೀದಿಸಿದಾಗಿನಿಂದ ಅವರು ಬ್ಯಾಂಕಿನ ಸಾಲ ಮತ್ತು ಇತರೆ ಸೌಲಭ್ಯಗಳನ್ನು ಪಡೆದಿದ್ದಾರೆ ಅಂದರೆ ನನಗೆ ಗೊತ್ತಿಲ್ಲಾ. ದಾವಾ ಆಸ್ತಿಗಳ ಮೇಲೆ ಸಾಲ ಕೂಡತಂತೆ ಬ್ಯಾಂಕುಗಳಿಗೆ ಮತ್ತು ಕಂದಾಯ ಇಲಾಖೆಗೆ ಯಾವುದೇ ತಕರಾರು ಅರ್ಜಿಯನ್ನು ಕೊಟ್ಟಿರುವುದಿಲ್ಲಾ. ನಾವು ದಾವಾ ಆಸ್ತಿಯ ಕಬ್ಜಾದಲ್ಲಿ ಇದ್ದೇವೆ ಅಂತಾ ತೋರಿಸಲು ದಾಖಲೆ ಗಳನ್ನು ಹಾಜರು ಮಾಡಿರುವುದಿಲ್ಲಾ. ನಾವು ದಾವಾ ಆಸ್ತಿಯ ಸಾಗುವಳಿ ಮಾಡುತ್ತೇವೆ ಅಂತಾ ತೋರಿಸಲು ಯಾವುದೇ ಭಾವಚಿತ್ರವನ್ನು ಹಾಜರು ಮಾಡಿರುವುದಿಲ್ಲಾ. ದಾವಾ ಆಸ್ತಿಗಳನ್ನು ನಾವೇ ಸಾಗುವಳಿ ಮಾಡುತ್ತೇವೆ ಅಂತಾ ನಾವು ಸಾಗುವಳಿ ಪತ್ರವನ್ನು ಹಾಜರು ಪಡಿಸಿರುವುದಿಲ್ಲಾ. ಅದಕ್ಕೆ ಅರ್ಜಿ ಸಹ ಸಲ್ಲಿಸಿರುವುದಿಲ್ಲಾ. ನಮ್ಮ ತಂದೆ ತಾಯಿ ಸಹೋದರರು ಹಾವೇರಿಯಲ್ಲಿ ವಾಸವಾಗಿ ದ್ದೇವೆ ಅಂದ್ರೆ ಸರಿಯಲ್ಲಾ. ನಮ್ಮ ತಂದೆ ತಾಯಿ ಮಾತ್ರ ಹಾವೇರಿಯಲ್ಲಿ ವಾಸವಾಗಿದ್ದಾರೆ

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ನಮ್ಮ ತಂದೆಗೆ ಸಂಬಂಧಪಟ್ಟಿದ್ದು ಅಂತಾ ನೋಡಿ ಗುರುತಿಸಿದ್ದಾರೆ. ಹಾವೇರಿಯ ಸರ್ವೆ ನಂ.276/ಅ ಪ್ಲಾಟ್ ನಂ.12 ಕ್ಷೇತ್ರ 01 ಗುಂಟೆ 12 ಆಣೆ ಪಹಣಿ ಪತ್ರಿಕೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿ-2 ಅಂತಾ ಗುರುತಿಸಲಾಯಿತು. ಸದರಿ ಆಸ್ತಿಯು ನಮ್ಮ ತಂದೆಯ ಸ್ವಯಾರ್ಜಿತ ಆಸ್ತಿಯಾಗಿರುವುದರಿಂದ ಅದನ್ನು ದಾವೆಯಲ್ಲಿ ಸೇರಿಸಿರುವುದಿಲ್ಲಾ. ಆ ರೀತಿ ನಾನು ದಾವೆಯಲ್ಲಿ ಹೇಳಿ ಬರೆಸಿರುವುದಿಲ್ಲಾ. ದಾವಾ-2 ಸಿ ಆಸ್ತಿಯು ನಮ್ಮ ನಮ್ಮ ತಂದೆಯ ಸ್ವಯಾರ್ಜಿತ ಆಸ್ತಿ ಎಂದು ಕ್ರಯ ಪತ್ರದಲ್ಲಿಬರೆಸಿ ನೊಂದಣಿ ಮಾಡಿಸಿಕೊಟ್ಟಿದ್ದಾರೆ ಅಂದ್ರೆ ನನಗೆ ಗೊತ್ತಿಲ್ಲಾ. ನ್ಯಾಯಾಲಯದ ಶುಲ್ಕವನ್ನು ಪಾವತಿಸುವುದರಿಂದ ತಪ್ಪಿಸಿಕೊಳ್ಳುವ ಸಲುವಾಗಿ ದಾವಾ ಅಸ್ತಿಯ ಸ್ವಾಧೀನದಲ್ಲಿ ಇದ್ದೇವೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದ್ರೆ ಸರಿಯಲ್ಲಾ. ಕಾರು, ಮೋಟಾರ ಸೈಕಲ್ಲು ಇತರೆ ಚರಾಸ್ತಿಗಳು

ನಮ್ಮ ತಂದೆಯ ಹೆಸರಿನಲ್ಲಿ ಇದ್ದರೂ ಅವುಗಳನ್ನು ಸೇರಿಸಿಲ್ಲಾ ಅಂದ್ರೆ ಸಾಕ್ಷಿಯು ಅವುಗಳು ಅವರ ಸ್ವಯಾರ್ಜಿತ ಆಸ್ತಿಗಳಾಗಿರುವುದರಿಂದ ಅವುಗಳನ್ನು ಸೇರಿಸಿಲ್ಲಾ ಅನ್ನುತ್ತಾರೆ. ದಾವಾ–2 ಬಿ ದಿಂದ ಡಿ ವರೆಗಿನ ಆಸ್ತಿಗಳನ್ನು ಮಾರಾಟ ಮಾಡಿ 10–12 ವರ್ಷಗಳ ನಂತರ ಈ ದಾವಾ ಸಲ್ಲಿಸಿದ್ದೆವೆ ಅಂದ್ರೆ ಸಾಕ್ಷಿಯು ನಮಗೆ ಗೊತ್ತಾದ ನಂತರ ಸಲ್ಲಿಸಿದ್ದೇವೆ ಅನ್ನುತ್ತಾರೆ. ನಿಡಿ–2 ಆಸ್ತಿಯು ಹಾವೇರಿಯ ಬಸವೇಶ್ವರ ನಗರದಲ್ಲಿ ಇದೆ ಅಂದ್ರೆ ನಿಜ. ಹಾವೇರಿಯ ಬಸವೇಶ್ವರ ನಗರವು ಪ್ರತಿಷ್ಟಿತ ಬಡಾವಣೆ ಅಂದ್ರೆ ನಿಜ. ಅಲ್ಲಿ ಆಸ್ತಿಗಳ ಮೌಲ್ಯ ಗುಂಟೆಗೆ ಕೋಟಿ ಇದೆ ಅಂದ್ರೆ ಸಾಕ್ಷಿ ಇರಬಹುದು ಅನುತ್ತಾರೆ. ಸದರಿ ಕಟ್ಟಡದಲ್ಲಿ ಎರಡು ಮನೆಗಳು ಇವೆ ಅಂದ್ರೆ ನಿಜ. ಕೆಳ ಅಂತಸ್ತಿನಲ್ಲಿ ಒಂದು ಮನೆ ಮೇಲಿನ ಅಂತಸ್ತಿನಲ್ಲಿ ಎರಡು ಮನೆಗಳು ಇವೆ ಅಂದ್ರೆ ನಿಜ. ಸದರಿ ಮನೆ ರೂ. 50,00,000/– ಮೌಲ್ಯದ್ದಾಗಬಹುದು. ಖರೀದಿದಾರರಿಗೆ ತೊಂದರೆ ಕೊಡಬೇಕೆಂದು ನಮ್ಮ ತಂದೆ ಮಾರಾಟ ಮಾಡಿದ ಆಸ್ತಿಗಳ ಮೇಲೆ ಮಾತ್ರ ದಾವಾ ಸಲ್ಲಿಸಿದ್ದೇವೆ ಅಂದ್ರೆ ಸರಿಯಲ್ಲಾ

: ಮರುವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್

ಸಾಕ್ಷಿದಾರರ ಸಹಿ